ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ,
ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 59/2020**

ಚಾ.ಸಾ.**-03**
ಪ್ರಾ.ಸಾ.**-02**

| | | |
|---|---|---|
| ಹೆಸರು | : | ಗಿರೀಶ್ ಕುಮಾರ್ |
| ತಂದೆಯ ಹೆಸರು | : | ಸುಬ್ಬಣ್ಣ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯಾಪರ |
| ವಾಸಸ್ಥಳ | : | ಮೈಸೂರು. |

ಪ್ರಮಾಣೀಕರಿಸಲಾದ ದಿನಾಂಕಃ- **07.07.2025.**

<u>ಮುಖ್ಯ ವಿಚಾರಣೆಃ- ಮಾನ್ಯ ಸ. ಸ. ಅ. ರವರಿಂದ:-</u>

ಮೃತ ರಮೇಶ್ ರವರು ನನಗೆ ಸಂಬಂಧಿಕಾರಾಗಬೇಕು. 2020 ರಲ್ಲಿ ರಮೇಶ್ ರವರಿಗೆ ರಸ್ತೆ ಅಪಘಾತವಾಗಿದ್ದು, ಆ ಸಮಯದಲ್ಲಿ ನಾನು ಮನೆಯಲ್ಲಿದ್ದೆ. ನನಗೆ ದೂರವಾಣಿ ಕರೆ ಮಾಡಿ ಅವರಿಗೆ ಅಪಘಾತವಾಗಿರುವ ಬಗ್ಗೆ ತಿಳಿಸಿರುತ್ತಾರೆ. ನಂತರ ನಾನು ಮನೆಯಿಂದ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಂತರ ಪೊಲೀಸರ ಕೋರಿಕೆಯ ಮೇರೆಗೆ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಅಪಘಾತವನ್ನು ನಾನು ನೇರವಾಗಿ ನೋಡಿರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸ.ಸ.ಅ. ವಾದವನ್ನು ಆಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲುಃ- ಮಾನ್ಯ ಸ. ಸ. ಅ. ರವರಿಂದಃ-</u>

ದಿನಾಂಕಃ 09.06.2020 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಲಾರಿ ಮತ್ತು ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿದ್ದು, ಸದರಿ ಅಪಘಾತವು ಲಾರಿ ಚಾಲಕನ ನಿರ್ಲಕ್ಷ್ಯತನದಿಂದ ಆಗಿರುತ್ತದೆ ಎಂದು ನನಗೆ ಚಾ.ಸಾ-1 ಮತ್ತು 10 ರವರು ತಿಳಿಸಿರುತ್ತಾರೆ ಎಂದರೆ ಸರಿ. ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

<u>ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದ :</u>

ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣಗಳು ಕಂಡು ಬರದೇ ಇದ್ದುದರಿಂದ ಸದರಿಯವರ ಪ್ರಾರ್ಥನೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆ :-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

ಸಾಕ್ಷಿದಾರರ ಸಹಿ.